# ಕುಂದಾಪುರ ಪುರಸಭೆ

ಕುಂದಾಪುರ ಪುರಸಭೆ ಉಡುಪಿ ಜಿಲ್ಲೆಯಲ್ಲಿದ್ದು, ಇದು 28,591 ಜನಸಂಖ್ಯೆ ಯನ್ನೊಂದಿದ್ದು, ಒಟ್ಟು 23 ವಾರ್ಡ್‌ಗಳಿವೆ. ಇದು 14.01 ಚ.ಕಿ.ಮೀ ವಿಸ್ತೀರ್ಣವನ್ನೊಂದಿದ್ದು 8,937 ಆಸ್ತಿಗಳನ್ನೊಂದಿದೆ.

## ಸಂಪನ್ಮೂಲ ಕ್ರೋಡೀಕರಣ

ಕುಂದಾಪುರದ ಪುರಸಭೆಯು ಅಕ್ಟೋಬರ್ 2007 ರಿಂದ ತನ್ನ ಸಂಪನ್ಮೂಲ ಕ್ರೋಡೀಕರಣಕ್ಕಾಗಿ ಉದ್ದಿಮೆ ಪರವಾನಗೆ, ಕಟ್ಟಡ ಪರವಾನಿಗೆಯನ್ನು ಪರಿಷ್ಕರಿಸಿ ಡಿಸೆಂಬರ್ 2007 ರಿಂದ ಜಾರಿಗೆ ಬರುವಂತೆ ಕರ್ನಾಟಕ ಪುರಸಭಾ ಕಾಯ್ದೆ ಸೆಕ್ಷನ್ 324 ರಂತೆ ಗೆಜೆಟ್‌ನಲ್ಲಿ ಪ್ರಕಟಿಸಿ ಅನುಷ್ಠಾನಗೊಳಿಸಿದೆ. ಅದರಂತೆ ಆದಾಯವನ್ನು ಗಣನೀಯ ಪ್ರಮಾಣದಲ್ಲಿ ಹೆಚ್ಚಿಸಿಕೊಂಡಿದೆ ಹಾಗೂ ಎಲ್ಲಾ ವಾಸ್ತವ್ಯ, ವಾಣಿಜ್ಯ ಕೈಗಾರಿಕಾ ಕಟ್ಟಡಗಳನ್ನು ತೆರಿಗೆ ಪಾವತಿ ವ್ಯಾಪ್ತಿಗೆ ಸೇರಿಸಿ ವಸೂಲಿ ಮಾಡಲಾಗುತ್ತಿದೆ. ಅನಧಿಕೃತ ಕಟ್ಟಡಗಳಿಗೆ ಎಸ್.ಎ.ಎಸ್ ಪದ್ದತಿಯಂತೆ ದಂಡನೆ ತೆರಿಗೆಯನ್ನು 2 ಪಟ್ಟು ವಸೂಲಾತಿ ಮಾಡಲಾಗುತ್ತಿದೆ. 2010–11 ನೇ ಸಾಲಿನಲ್ಲಿ 99.50% ಕಟ್ಟಡ ತೆರಿಗೆಯನ್ನು ವಸೂಲಿ ಮಾಡಲಾಗಿದೆ.

**ಕಟ್ಟಡ ತೆರಿಗೆ ಮಸೂಲಿ ತೆರಿಗೆಯೇತರ ಆದಾಯ ವಿವರಗಳು**

| ಕ್ರ.ಸಂ | ವರ್ಷ | ಕಟ್ಟಡ ತೆರಿಗೆ (ರೂ) | ಶೇಕಡವಾರು | ವಿಧಿಸಿದ ದರ | ತೆರಿಗೆಯೇತರ ಆದಾಯ (ರೂ) |
|---|---|---|---|---|---|
| 1 | 2006–07 | 49,18,500.00 | 93.54% | ವಾಸ್ತವ್ಯ ಕಟ್ಟಡದ ಮೌಲ್ಯದ ಮೇಲೆ ಶೇ 0.3 ರಂತೆ ವಾಣಿಜ್ಯ ಕಟ್ಟಡದ ಮೇಲೆ ಶೇ.0.5ರಂತೆ | 64,75,638.00 |
| 2 | 2007–08 | 56,10,800.00 | 95.68 | ವಾಸ್ತವ್ಯ ಕಟ್ಟಡದ ಮೌಲ್ಯದ ಮೇಲೆ ಶೇ 0.3 ರಂತೆ ವಾಣಿಜ್ಯ ಕಟ್ಟಡದ ಮೇಲೆ ಶೇ.0.5ರಂತೆ | 65,50,750.00 |
| 3 | 2008–09 | 71,52,000.00 | 96.41 | ಮಾರುಕಟ್ಟೆ ಮೌಲ್ಯದ 50% ದ ಮೇಲ ವಾಸ್ತವ್ಯ ಶೇ. 0.6ರಂತೆ ವಾಣಿಜ್ಯ ಶೇ. 1.0ರಂತೆ | 77,70,670.00 |
| 4 | 2009–10 | 81,62,540.00 | 98.61 | ಮಾರುಕಟ್ಟೆ ಮೌಲ್ಯದ 50% ದ ಮೇಲ ವಾಸ್ತವ್ಯ ಶೇ. 0.6ರಂತೆ ವಾಣಿಜ್ಯ ಶೇ. 1.0ರಂತೆ | 63,58,050.00 |
| 5 | 2010–11 | 1,03,05,892.00 | 99.50 | ಮಾರುಕಟ್ಟೆ ಮೌಲ್ಯದ 50% ದ ಮೇಲ ವಾಸ್ತವ್ಯ ಶೇ. 0.6ರಂತೆ ವಾಣಿಜ್ಯ ಶೇ. 1.0ರಂತೆ | 75,52,494.00 |

**ತೆರಿಗೆ ಆದಾಯದ ಬೇಡಿಕೆ (ವಸತಿ ಹಾಗೂ ವಸತಿಯೇತರ) ವಸೂಲಿ ಹಾಗೂ ಗುರುತಿಸಿದ-ಗುರುತಿಸಲ್ಪಡದ ಆಸ್ತಿ ವಿವರಗಳು**

| ಕ್ರ.ಸಂ | ವರ್ಷ | ಬೇಡಿಕೆ | ವಸೂಲಿ | ಗುರುತಿಸಲ್ಪಡುವ ಆಸ್ತಿಗಳು | ಗುರುತಿಸಲ್ಪಡದ ಆಸ್ತಿಗಳು |
|---|---|---|---|---|---|
| 1 | 2006–07 | 52,58,000.00 | 49,18,500.00 | 8,735 | 28 |
| 2 | 2007–08 | 58,64,100.00 | 56,10,800.00 | 8,790 | 31 |
| 3 | 2008–09 | 72,52,800.00 | 71,52,000.00 | 8,849 | 36 |
| 4 | 2009–10 | 82,40,500.00 | 81,62,540.00 | 8,898 | 31 |
| 5 | 2010–11 | 1,03,57,600.00 | 1,03,05,892.00 | 8,937 | 32 |

ಗುರುತಿಸಲ್ಪಡದ ಅನಧಿಕೃತ ಆಸ್ತಿಗಳಿಗೆ 2 ಪಟ್ಟಿನಂತೆ ದಂಡನೆ ತೆರಿಗೆ ವಸೂಲಿ ಮಾಡಲಾಗುತ್ತಿದೆ.

**ಜಾಹೀರಾತು ಫಲಕಗಳ ಆದಾಯದ ವಿವರ**

ಕರ್ನಾಟಕ ಪುರಸಭೆ ಕಾಯ್ದೆ ಸೆಕ್ಷನ್ 133 ರಂತೆ ಪುರಸಭಾ ವ್ಯಾಪ್ತಿಯಲ್ಲಿ ಜಾಹೀರಾತು ಫಲಕಗಳನ್ನು ಅಳವಡಿಸುವ ಪೂರ್ವದಲ್ಲಿ ಪುರಸಭೆಯಿಂದ ಶುಲ್ಕ ಪಾವತಿ ಮಾಡಿ ಅನುಮತಿ ಪಡೆಯಬೇಕಾಗಿದ್ದು, ಅದರಂತೆ ಪ್ರತಿಯೊಂದು ಜಾಹೀರಾತು ಫಲಕಗಳನ್ನು ಅಳವಡಿಸುವಾಗ ಪ್ರತಿಯೊಂದು ಫಲಕದ ಬ್ಯಾನರಿಗೆ ಶುಲ್ಕ ವಿಧಿಸಿ ವಸೂಲಿ ಮಾಡಲಾಗುತ್ತಿದೆ. ಅನಧಿಕೃತ ಬ್ಯಾನರ್‌ಗಳನ್ನು ತೆರವುಗೊಳಿಸಲಾಗುತ್ತಿದೆ. ಈ ಶುಲ್ಕವನ್ನು ಕಡ್ಡಾಯವಾಗಿ ವಿಧಿಸಿರುವುದರಿಂದ ಪುರಸಭೆಗೆ ಆದಾಯದಲ್ಲಿ ಹೆಚ್ಚಳವಾಗಿದೆ.

| ಕ್ರ.ಸಂ | ವರ್ಷ | ಆದಾಯ (ರೂ. ಗಳಲ್ಲಿ) |
|---|---|---|
| 1 | 2006–07 | 9,351.00 |
| 2 | 2007–08 | 23,450.00 |
| 3 | 2008–09 | 36,675.00 |
| 4 | 2009–10 | 28,529.00 |
| 5 | 2010–11 | 86,365.00 |

**ನೀರು ಸರಬರಾಜು ನಿರ್ವಹಣೆ ವಿವರ**

1973 ರಿಮದ ಪುರಸಭೆಯು ಬಾವಿಗಳ ಮೂಲಕ ಅಂದರೆ ಇದರಲ್ಲಿ 11 ಪುರಸಭೆಯ ಬಾವಿಗಳು ಹಾಗೂ 6 ಖಾಸಗಿ ಬಾವಿಗಳು, ಒಟ್ಟು 17 ಬಾವಿಗಳಿಂದ ಯಾವುದೇ ಶುದ್ದೀಕರಣವಿಲ್ಲದೇ ನೇರವಾಗಿ ನೀರು ಸರಬರಾಜು ಮಾಡಲಾಗುತ್ತಿದ್ದು, ಒಟ್ಟು 9 ಎಮ್.ಎಲ್.ಡಿ ನೀರನ್ನು ಪ್ರತೀ ದಿನ 2 ರಿಂದ 3 ಗಂಟೆಯ ವರೆಗೆ ನಾಗರೀಕರಿಗೆ

ನೀರು ಸರಬರಾಜು ಮಾಡಲಾಗುತ್ತಿದೆ. ಈ ಪೈಕಿ 406 ಮನೆಗಳಿಗೆ, ನಲ್ಲಿ ನೀರು ಸಂಪರ್ಕ ಮತ್ತು 1,400 ಸಾರ್ವಜನಿಕ ನಲ್ಲಿ ನೀರು ಸಂಪರ್ಕ ಹೊಂದಿದ್ದು, 406 ಮನೆಗೆ ಹೊಂದಿದ ಜೋಡಣೆಗಳಿಗೆ ಕನಿಷ್ಠ ರೂ. 45.00 ಮತ್ತು ಕನಿಷ್ಠದ ನಂತರದ 1,000 ಲೀ.ಗೆ ತಲಾ ರೂ. 6.00 ರಂತೆ ಸರ್ಕಾರದ ಸುತ್ತೋಲೆಯಂತೆ ವಸೂಲಿ ಮಾಡಲಾಗುತ್ತಿದ್ದು, ಬೇಸಿಗೆಯಲ್ಲಿ ಬಾವಿಯಲ್ಲಿ ನೀರು ಬತ್ತುವುದರಿಂದ ಟ್ಯಾಂಕರ್ ಮೂಲಕ ನೀರನ್ನು ಸರಬರಾಜು ಮಾಡಲಾಗುತ್ತಿತ್ತು. ಪ್ರತಿ ವರ್ಷದ ಬೇಸಿಗೆಯಲ್ಲಿ ನೀರಿನ ಸಮಸ್ಯೆ ಇರುತ್ತಿತ್ತು.

ಕುಡ್ಸೆಂಪ್ ಯೋಜನೆಯಡಿ ನಗರ ಪ್ರದೇಶದಿಂದ ಸುಮಾರು 12 ಕಿ.ಮೀ ದೂರದಲ್ಲಿರುವ ಜಂಜೂ ನದಿಗೆ ಅಡ್ಡಲಾಗಿ ಜ್ಯಾಕ್‌ವೇಲ್ ಮತ್ತು ಜಪ್ತಿ ಗ್ರಾಮದಲ್ಲಿ ಟ್ರೀಟ್‌ಮೆಂಟ್ ಪ್ಲಾಂಟ್, ಎರಡು 7.6 ಲಕ್ಷ ಲೀ ಸಾಮರ್ಥ್ಯದ ಜಲ ಸಂಗ್ರಹಗಾರ ಮತ್ತು 5.00 ಲಕ್ಷ ಲೀ. ಸಾಮರ್ಥ್ಯದ 3 ಟ್ಯಾಂಕ್‌ಗಳನ್ನು ಮತ್ತು ನಗರ ಪ್ರದೇಶಗಳಲ್ಲಿ 53 ಕಿ.ಮೀ ಹೆಚ್‌ಡಿಪಿಇ ಪೈಪ್ ಲೈನ್ ವಿಸ್ತರಣೆ ಮಾಡಲಾಗಿದೆ. ಕುಂದಾಪುರ ಪುರಸಭಾ ವ್ಯಾಪ್ತಿಯಲ್ಲಿ ನೀರು ಸರಬರಾಜು ಸೋರಿಕೆಯನ್ನು ತಡೆಗಟ್ಟುವ ಹಿತದೃಷ್ಟಿಯಿಂದ ಸಿಬ್ಬಂದಿಗಳಿಂದ ತ್ವರಿತಗತಿಯಲ್ಲಿ ನೀರು ಸರಬರಾಜು ದುರಸ್ಥಿ ಕೆಲಸ ಕಾರ್ಯಗಳನ್ನು ನಿರ್ವಹಿಸಲಾಗಿದೆ. ಯಾವುದೇ ತರಹದ ಸೋರಿಕೆಯನ್ನು ದಿನದ 24 ಗಂಟೆಯೊಳಗೆ ದುರಸ್ಥಿ ಮಾಡಲಾಗುತ್ತಿದೆ. ಹಾಗೂ ಸುಮಾರು ರೂ. 13.01 ಕೋಟಿ ವೆಚ್ಚದಲ್ಲಿ ಶುದ್ಧೀಕರಣ ಘಟಕವನ್ನು ನಿರ್ಮಿಸಿ 2007 ರಿಂದ ನಗರಕ್ಕೆ ಶುದ್ಧೀಕರಿಸಿದ ಗುಣಮಟ್ಟದ ನೀರನ್ನು ಸರಬರಾಜು ಮಾಡಲಾಗುತ್ತಿದೆ. ಮತ್ತು 2.01 ಎಂ.ಎಲ್.ಡಿ ನೀರನ್ನು ಸರಬರಾಜು ಮಾಡಲಾಗುತ್ತಿದೆ. ಈ ಯೋಜನೆಯಿಂದ ನಗರದ ನಾಗರಿಕರಿಗೆ ಶುದ್ಧ ಕುಡಿಯುವ ನೀರನ್ನು ದಿನಕ್ಕೆ 8 ಗಂಟೆ ಕಾಲ ಸರಬರಾಜು ಮಾಡಲು ಸಾಧ್ಯವಾಗಿದೆ. ಈ ಹಿಂದೆ ಇದ್ದ ಸಾರ್ವಜನಿಕ ನಲ್ಲಿ ನೀರು ಜೋಡಣೆಗಳನ್ನು ಕಡಿತಗೊಳಿಸಿ ಹಾಗೂ ಸಾರ್ವಜನಿಕರು ವೈಯಕ್ತಿಕವಾಗಿ ಪ್ರತಿ ಮನೆಗೂ ಮೀಟರ್ ಸಹಿತ ನೀರು ಸರಬರಾಜು ಜೋಡಣೆ ಪಡೆದುಕೊಳ್ಳುವಂತೆ ತಿಳುವಳಿಕೆ ನೀಡಿರುವುದರನ್ವಯ ಸುಮಾರು 2,225 ವಾಸ್ತವ್ಯ ಮತ್ತು 49 ವಾಣಿಜ್ಯ ಉದ್ದೇಶಕ್ಕೆ ನಲ್ಲಿ ನೀರಿನ ಜೋಡಣೆಯಾಗಿದ್ದು, ಪರಿಶಿಷ್ಟ ಜಾತಿ / ಪಂಗಡದವರಿಗೆ ಠೇವಣಿ ವಿನಾಯಿತಿ ನೀಡಿ ಅವರ ಎಲ್ಲಾ ಮನೆಗಳಿಗೆ ನಲ್ಲಿ ನೀರು ಸಂಪರ್ಕ ನೀಡಲಾಗಿದೆ. ಪ್ರಸ್ತುತ ಕುಂದಾಪುರ ಪುರಸಭಾ ವ್ಯಾಪ್ತಿಯಲ್ಲಿ ಯಾವುದೇ ಸಾರ್ವಜನಿಕ ನಲ್ಲಿ ನೀರು ಜೋಡಣೆಗಳು ಇರುವುದಿಲ್ಲ ಹಾಗೂ ವರ್ಷಕ್ಕೆ ರೂ. 30.00 ಲಕ್ಷ ನಲ್ಲಿ ನೀರಿನ ತಗಾದೆ ಹೊಂದಿದ್ದು, ಇದರಲ್ಲಿ ಶೇ. 96% ರಷ್ಟು ವಸೂಲಿಯಾಗಿರುತ್ತದೆ. ನೀರಿನ ದರವನ್ನು ಪರಿಷ್ಕರಿಸಲಾಗಿದೆ.

| ವಿವರ | ವಾಸ್ತವ್ಯ (ರೂ. ಗಳಲ್ಲಿ) | ವಾಣಿಜ್ಯ (ರೂ. ಗಳಲ್ಲಿ) | ಸರ್ಕಾರದ ಕಛೇರಿ (ರೂ. ಗಳಲ್ಲಿ) | ಇತರೆ ಕಟ್ಟಡಗಳು (ರೂ. ಗಳಲ್ಲಿ) | ಖಾಸಗಿ ಆಸ್ಪತ್ರೆಗಳು (ರೂ. ಗಳಲ್ಲಿ) |
|---|---|---|---|---|---|
| 15 ಸಾವಿರ ಲೀ ವರೆಗೆ ಕನಿಷ್ಠ ರೂ | 75/– | 150/– | 75/– | 200/– | 100/– |
| 15 ಸಾವಿರದಿಂದ 25 ಸಾವಿರ ಲೀ ವರೆಗೆ | 100/– | 300/– | 100/– | 350/– | 150/– |
| 25 ಸಾವಿರ ಲೀ ನಂತರದ ಪ್ರತಿ ಸಾವಿರ ಲೀ ಗೆ | 8/– | 15/– | 8/– | 15/– | 15/– |

ಈ ಪುರಸಭಾ ವ್ಯಾಪ್ತಿಯಲ್ಲಿ ನೀರು ಸರಬರಾಜು ನಿರ್ವಹಣೆಯನ್ನು 3 ವಲಯಗಳಾಗಿ ವಿಂಗಡಿಸಲಾಗಿದ್ದು, ಈ ವಲಯಗಳ ಪೈಕಿ 1 ಮತ್ತು 2 ವಲಯದಲ್ಲಿ ಕುಡಿಯುವ ನೀರನ್ನು ದಿನದ ಸತತ 24 ಗಂಟೆಗಳವರೆಗೆ ಒದಗಿಸಲಾಗುತ್ತಿದ್ದು, 3ನೇ ವಲಯದಲ್ಲಿ ದಿನಕ್ಕೆ 8 ಗಂಟೆಗಳ ಕಾಲ ನೀರು ಸರಬರಾಜು ಮಾಡಲಾಗುತ್ತಿದೆ. ಹಾಗೂ ಜಪ್ತಿಯಿಂದ ಕುಂದಾಪುರ ನಗರಕ್ಕೆ ಸರಬರಾಜು ಮಾಡುವ ಪೈಪ್‌ಲೈನ್ ಹಾದು ಬರುವ ಮಾರ್ಗದಲ್ಲಿ ಬಸ್ರೂರು, ಕೋಣಿ ಮತ್ತು ಆನಗಳ್ಳಿ ಗ್ರಾಮ ಪಂಚಾಯತ್‌ಗಳಿಗೆ ಬಲ್ಕ್ ಮೀಟರ್ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ. ಸಾರ್ವಜನಿಕ ನಲ್ಲಿ ನೀರು ಜೋಡಣೆಯನ್ನು ಕಡಿತಗೊಳಿಸಿ ಮನೆ ಮನೆಗೆ ನೀರಿನ ಜೋಡಣೆಯನ್ನು ಮೀಟರ್ ಮೂಲಕ ಅಳವಡಿಸಿರುವುದರಿಂದ ಮತ್ತು ನೀರು ಖರ್ಚಾಗಿರುವ ಬಗ್ಗೆ ಗಣಾಂಕವನ್ನು ಓದಿ ಬಿಲ್ಲು ನೀಡುವ ಕಾರ್ಯವನ್ನು ಹೊರಗುತ್ತಿಗೆಗೆ ನೀಡಲಾಗಿದೆ. ಪ್ರತಿ ಮಾಹೆಯಲ್ಲಿ ಶೇ. 100% ರಷ್ಟು ಬಿಲ್ಲಿಂಗ್ ನಿರ್ವಹಣೆಯನ್ನು ಮಾಡಲಾಗುತ್ತಿದೆ. ಈ ಕಾರ್ಯವನ್ನು ಒಂದೇ ವರ್ಷದಲ್ಲಿ ಪೂರೈಸಿರುವುದರನ್ವಯ Reduction in Percentage off Non–Revenue Water ಇದರಲ್ಲಿ 2009ರಲ್ಲಿ ಭಾರತದ ಮಾನ್ಯ ರಾಷ್ಟಪತಿಯವರಿಂದ Non–Revenue Water ಪ್ರಶಸ್ತಿಯನ್ನು ಪಡೆಯಲಾಗಿದೆ. ಮತ್ತು ಈ ಪುರಸಭೆಗೆ ಉತ್ತಮ ಪದ್ಧತಿ (Best Practices) ನಿರ್ವಹಣೆಯಲ್ಲಿ 2009–10 ನೇ ಸಾಲಿಗೆ ದಿನಾಂಕ 01/02/2011 ರಂದು ಮಾನ್ಯ ನಗರಾಭಿವೃದ್ಧಿ ಸಚಿವರಿಂದ ಪ್ರಶಸ್ತಿ ಪಡೆಯಲಾಗಿದೆ.

**ನೀರು ಸರಬರಾಜು ನಿರ್ವಹಣೆಯ ಮುಂದಿನ ಗುರಿ**

1. ಇಡೀ ನಗರ ಪ್ರದೇಶ ವ್ಯಾಪ್ತಿಯಲ್ಲಿ ನೀರು ಸರಬರಾಜು ವಿಸ್ತರಣೆ.
2. ಶುದ್ಧೀಕರೀಸಿದ ಮತ್ತು ಗುಣಮಟ್ಟದ ನೀರನ್ನು ಒದಗಿಸುವುದು.
3. ಜಲ ಸಂಗ್ರಹಗಾರರನ್ನು ಹೆಚ್ಚಿಸುವುದು.
4. ಒಬ್ಬ ವ್ಯಕ್ತಿಗೆ ದಿನಕ್ಕೆ 135 ಲೀ ವರೆಗೆ ನೀರನ್ನು ಒದಗಿಸುವುದು.

5. ವಾಸ್ತವ್ಯ ಮತ್ತು ವಾಣಿಜ್ಯ ನಲ್ಲಿ ನೀರಿನ ಜೋಡಣೆಗೆ ಸುಮಾರು 5 ಸಾವಿರ ವರೆಗೆ ಹೆಚ್ಚಿಸುವುದು.

6. ಪ್ರತಿ ನಿತ್ಯ ಸತತ 24 ಗಂಟೆ ನೀರು ಸರಬರಾಜು ಮಾಡುವುದು.

**ನೀರು ಸರಬರಾಜು ವಿವರ**

| Year | Total Water Supply in KC | Total Billed Consumption | % of NRW |
|---|---|---|---|
| 2004-05 | 24,450 | 4,440 | 81.81% |
| 2005-06 | 24,450 | 5,370 | 78.05% |
| 2006-07 | 24,450 | 3,960 | 83.79% |
| 2007-08 | 36,000 | 16,050 | 55.37% |
| 2008-09 | 38,250 | 33,150 | 13.38% |
| 2009-10 | 25,117 | 42,438 | 18.79% |